

ಮೆಲಿಸ್ಸಾನಿಯೊಳಗಿನ ಶಿಲಾರಚನೆಗಳು



ಆಳದ ಕಂದಕಕ್ಕೆ ಬಿದ್ದಿತು. ಆಗಲೇ ಲೋಕಕ್ಕೆ ತಿಳಿದಿದ್ದು, ಇದೊಂದು ಸುಣ್ಣಕಲ್ಲಿನಿಂದ ರೂಪುಗೊಂಡ ಪ್ರಾಚೀನ ಗುಹೆ. ಕೆಳಭಾಗದಲ್ಲಿದೆ ವೈಢೂರ್ಯ ಬಣ್ಣದ ಅಪರೂಪದ ಲೇಕ್ ಎಂದು. ಲೇಕ್ ಉದ್ದ 164 ಮೀ. ಅಗಲ 40 ಮೀಟರ್, ಎತ್ತರ 36 ಮೀಟರ್. ಈ ಭೂಭಾಗದ ಬಂಡೆಗಳಲ್ಲಿ ಸಾವಿರಾರು ವರ್ಷಗಳಿಂದ ಪ್ರಾಕೃತಿಕವಾಗಿ ಜರುಗಿದ ರಾಸಾಯನಿಕ ಕ್ರಿಯೆಗಳಿಂದ ಬಂಡೆಗಲ್ಲಿನ ಸವಕಳಿ ಹೆಚ್ಚುತ್ತಾ ಅದರಲ್ಲಿನ ಜಲಾಂಶ ಖನಿಜಾಂಶಗಳೊಂದಿಗೆ ಕರಗಿ ಇಳಿದು, ಆಳವಾದ ನಿರ್ವಾತವನ್ನೂ ಸರೋವರವನ್ನೂ ಸೃಷ್ಟಿಸಿದೆ.

ಈ ಅಪರೂಪದ ಸಿರಿಯನ್ನು ಮೊದಲು ಕಂಡುಹಿಡಿದಿದ್ದು 1951ರಲ್ಲಿ ಪೆಟ್ರೋಶಿಲೋಸ್ ಎಂಬ ಪಳೆಯುಳಿಕೆ ಶಾಸ್ತ್ರಜ್ಞ. ಮುಂದೆ 1962ರಲ್ಲಿ ನಡೆದ ಉತ್ಖನನದಿಂದ ಇಲ್ಲಿ ಪೌರಾಣಿಕ ದಂತಕಥೆಯ ದೇವನಾದ ಪಾನ್ ಮತ್ತು ಅಪ್ಸರಾ ಸ್ತ್ರೀ ಮೆಲಿಸ್ಸಾನಿಯರನ್ನು ಪೂಜಿಸುತ್ತಿದ್ದ ಪಳೆಯುಳಿಕೆ, ಚಿತ್ರಗಳು ಕಂಡುಬಂದು, ಪಾನ್ ಮತ್ತು ಮೆಲಿಸ್ಸಾನಿಯರ ಪೂಜಾಸ್ಥಾನವಾಗಿತ್ತು ಈ ಲೇಕ್ ಎಂಬುದು ನಿಖರಗೊಂಡಿದೆ.

**ದಂತಕಥೆ:** ಮೆಲಿಸ್ಸಾನಿ ಅತ್ಯಪರೂಪದ ಚೆಲುವೆ, ಅಪ್ಸರಾ ಸ್ತ್ರೀ. ಇವಳು ಸುಂದರ, ದೃಢಕಾಯನಾದ, ಸ್ವರ್ಗವಾಸಿ ತರುಣ ದೇವ ಪಾನ್‌ನನ್ನು ಪ್ರೇಮಿಸುತ್ತಾಳೆ. ಮೆಲಿಸ್ಸಾನಿ ಸ್ವರ್ಗಕ್ಕೆ ಸೇರಿದವಳಲ್ಲ, ಸ್ವರ್ಗದ ದೇವತೆಗಳಿಗೆ ಭೂಲೋಕದಲ್ಲಿರುವ ಅಪ್ಸರಾಸಖಿ, ಭೂಸಹಜ ನಿಸರ್ಗ ದೇವತೆಯಂತೆ ಅಷ್ಟೇ. ಅರಣ್ಯ, ಪರ್ವತ, ಜಲ, ಸಮುದ್ರ ಹೀಗೆ ಭೂಸಂರಕ್ಷಣಾಧಿ ಅಪ್ಸರೆಯರು ಸ್ವರ್ಗದ ದೇವತೆಯರಿಗೆ ಪ್ರಿಯರಾಗಿದ್ದರು. ವ್ಯತಿರಿಕ್ತವಾಗಿ ಪಾನ್ ಸ್ವರ್ಗದ ದೇವ. ಇಂಥವನೊಂದಿಗೆ ಮೆಲಿಸ್ಸಾನಿ ಪ್ರೀತಿಯಲ್ಲಿ ಬಿದ್ದಳು, ಆದರೆ ಪಾನ್ ತಟಸ್ಥ, ಅವಳ ಪ್ರೇಮವನ್ನು ಪುರಸ್ಕರಿಸದೆ ತನ್ನ ಪಾಡಿಗೆ ತಾನು ಉಳಿದುಬಿಟ್ಟ. ಲೌಕಿಕದವರು ತಮ್ಮ ತೀವ್ರ ಪ್ರೇಮಭಾವಗಳಿಗೆ ಪಕ್ಕಾಗಿ ಕಡೆಗೆ ಪರಿತಪಿಸುವಂತೆ, ನಿರೀಕ್ಷಣೆಯಲ್ಲಿ ನೊಂದು ಬಳಲಿದ ಮೆಲಿಸ್ಸಾನಿ ಕೂಡ ಭಗ್ನಪ್ರೇಮದ ತಿರಸ್ಕಾರವನ್ನು ಸಹಿಸಿಕೊಳ್ಳಲಾಗದೆ ಇಲ್ಲಿಯ ಸ್ಫಟಿಕ, ವರ್ಣಮಯ ಕೊಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡುಬಿಟ್ಟಳು.

ಮುಂದೆ ಇಲ್ಲಿಯ ಜೀವರು ಮೆಲಿಸ್ಸಾನಿಯನ್ನು ದೇವತೆ ಎಂದು ಪೂಜಿಸತೊಡಗಿದರು; ಅವಳು ಬದುಕನ್ನು ಅಂತ್ಯಗೊಳಿಸಿಕೊಂಡ ಈ ವರ್ಣಮಯ ಸರೋವರವನ್ನು 'ಲೇಕ್ ಮೆಲಿಸ್ಸಾನಿ' ಎಂದೇ ಹೆಸರಿಟ್ಟು ಆರಾಧಿಸತೊಡಗಿದರು.

## ಅದ್ಭುತ ಶಿಲಾರಚನೆಗಳು

ಇದೊಂದು ಭೂಗರ್ಭದ ಚಮತ್ಕಾರೀ ವಿದ್ಯಮಾನ. ಕೆಫಲೋನಿಯಾ ದ್ವೀಪದ ರಾಜಧಾನಿ, 'ಆರ್ಗೋಸ್ಟೋಲಿ' ಬಂದರು ನಗರ, ಲಗೂನ್‌ಗಳ ಸ್ವರ್ಗ ಇಲ್ಲಿಂದ ಈ ಲೇಕ್‌ಗಿರುವ ದೂರ 10 ಕಿ.ಮೀ. ಈ ಬಂದರು ಪ್ರದೇಶದ ಮೇಲ್ಪದರದ ಮಣ್ಣಿನಲ್ಲಿ ಇಂಗುಗುಂಡಿಯ ಸೂಕ್ಷ್ಮ ರಚನೆಗಳಿದ್ದು ಇಲ್ಲಿ ಸೋರಿಕೆಯಾದ ಸಾಗರದ ಜಲವು ಭೂಗರ್ಭಕ್ಕಿಳಿದು, ಬಂಡೆಗಳ ಬಿರುಕಿನ ಪ್ರಾಕೃತಿಕ ಮಾರ್ಗದಲ್ಲಿ ಮೆಲ್ಲಗೆ ಪ್ರವಹಿಸಿ, ಸುಮಾರು 14 ದಿನಗಳ ಕಾಲಾವಕಾಶದಲ್ಲಿ ಮೆಲಿಸ್ಸಾನಿ ಸರೋವರದಲ್ಲಿ ಸಂಗ್ರಹಗೊಳ್ಳುತ್ತದೆ. ಇದು ಭೂವಿಜ್ಞಾನಿಗಳು ತಮ್ಮ ಶೋಧಕಾರ್ಯದಲ್ಲಿ ಕಂಡುಹಿಡಿದಿರುವ ಚಮತ್ಕಾರೀ ನೈಸರ್ಗಿಕ ಜಲಯಾನ. ಇಲ್ಲಿಯ ಇನ್ನೊಂದು ಚಮತ್ಕಾರವೆಂದರೆ ಹೀಗೆ ಗರ್ಭದಲ್ಲಿ ಪ್ರವಹಿಸುವ ಸಾಗರಜಲ ಭೂಗರ್ಭದಲ್ಲಿ ತುಂಬಿರುವ ಸಿಹಿನೀರಿನ ಜೊತೆಗೂಡಿ ಮೆಲಿಸ್ಸಾನಿಯಲ್ಲಿ ಕೂಡುವ ಲೇಕ್‌ನಲ್ಲಿ ನೀರು ಅತ್ಯುತ್ತಮ ಜಲಮೂಲವಾಗಿ ಪರಿವರ್ತಿತವಾಗಿರುತ್ತದೆ. ಜಲದ ನಿರಂತರ